**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 429/2024**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ದ-

ಆರೋಪಿ/ತರು ಃ ಸೈಯದ್ ಮತ್ತು ಇತರರು

**-ಃದೋಷಾರೋಪಣೆಃ-**

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮನ್ಸೂರ್ ಅಹಮದ್ (ಮೃತಪಟ್ಟಿರುತ್ತಾರೆ)
2. ಸೈಯದ್ ಸಾದಿಕ್ ಬಿನ್ ಸೈಯದ್ ಖಲಂದರ್, 19 ವರ್ಷ, ವಾಸಃಚಿಕ್ಕೆರೆ, ಕೋಡಿಕ್ಯಾಂಪ್, ತರೀಕೆರೆ ತಾಲ್ಲೂಕು.
3. ಸೈಯದ್ ಸುಬಾನ್ ಬಿನ್ ಸೈಯದ್ ಖಲಂದರ್, 20 ವರ್ಷ, ಕೂಲಿ ಕೆಲಸ, ವಾಸಃಚಿಕ್ಕೆರೆ, ಕೋಡಿಕ್ಯಾಂಪ್, ತರೀಕೆರೆ.
4. ಮುಬಾರಕ್ ಬಿನ್ ಅಬ್ದುಲ್ ಬಾಷಾ, 22 ವರ್ಷ, ಕೂಲಿ ಕೆಲಸ, ವಾಸಃ3 ನೇ ಕ್ರಾಸ್, ಬೋವಿ ಕಾಲೋನಿ, ತರೀಕೆರೆ ತಾಲ್ಲೂಕು.
5. ಮುಬಾರಕ್ ಬಾಷಾ ಬಿನ್ ಅಹಮದ್ ಜಾನ್, 24 ವರ್ಷ, ವಾಸಃಉರ್ದುಸರ್ಕ್ಯಲ್ ಹಿಂಭಾಗ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
6. ಪರ್ವೀಜ್ ಅಹಮ್ಮದ್ ಬಿನ್ ಫಯಾಜ್ ಅಹಮ್ಮದ್, 23 ವರ್ಷ, ವಾಸಃ3 ನೇ ಕ್ರಾಸ್ ಬೋವಿ ಕಾಲೋನಿ, ಕೋಡಿಕ್ಯಾಂಪ್, ತರೀಕೆರೆ ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ14.01.2024 ರಂದು ರಾತ್ರಿ 9-00 ರ ಸಮಯದಲ್ಲಿ ತರೀಕೆರೆ ಠಾಣಾ ವ್ಯಾಪ್ತಿಯ ತರೀಕೆರೆ ಪಟ್ಟಣದ ಚಿಕ್ಕರೆಗೆ ಹೋಗುವ ಟಾರು ರಸ್ತೆಯಲ್ಲಿ ಚಾಸಾ-1 ರವರು ತಮ್ಮ ಮೊಬೈಲ್ ನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ**.143** ಸಹಕಲಂ **149** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಏಕೋದ್ದೇಶದಿಂದ ದೊಂಬಿ ಮಾಡಲು ಅಕ್ರಮಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ**.144** ಸಹಕಲಂ **149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಕೈಗಳಲ್ಲಿ ಮಾರಕ ಆಯುಧವನ್ನು ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ**.147** ಸಹಕಲಂ **149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಮಾರಕಾಯುಧವನ್ನು ಹಿಡಿದುಕೊಂಡು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ**.148** ಸಹಕಲಂ **149** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ಏನೋ ಬೋಳಿಮಗನೇ ನಮ್ಮ ಮುಂದೆಯೇ ಜೋರಾಗಿ ಮೊಬೈಲ್ ನಲ್ಲಿ ಮಾತನಾಡಿಕೊಂಡು ಹೋಗುತ್ತೀಯಾ ಎಂದು ಎಲ್ಲರೂ ಅವಾಚ್ಯವಾಗಿ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ**.504** ಸಹಕಲಂ **149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**323** ಸಹಕಲಂ **149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಬಿದಿರಿನ ದೊಣ್ಣೆಯಿಂದ ತಲೆಗೆ, ಮೈಕೈಗೆ ಹೊಡೆದಿದ್ದು ಹಾಗೂ 3 ನೇ ಆರೋಪಿಯಾದ ನೀವು ಬಿದಿರಿನ ದೊಣ್ಣೆಯಿಂದ ಚಾಸಾ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**324** ಸಹಕಲಂ **149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಮರದ ದೊಣ್ಣೆಯಿಂದ ತಲೆಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು ಹಾಗೂ ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**326** ಸಹಕಲಂ **149** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಎ-2

ಎ-3

ಎ-4

ಎ-5

ಎ-6

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉ:

ಎ-2
ಎ-3

ಎ-4

ಎ-5

ಎ-6

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕ:

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ತರೀಕೆರೆ.

ಆರೋಪಿತರ ಸಹಿ: